4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರ ಪತ್ರಿಕೆಯನ್ನ ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಜಡಸವಾಲ್‌ದಾರ್ರು ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಕೇಕಡಾ 25 ರೂಪಾಯಿ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ ಮಾಡಬೇಕಲ್ಲದೆ ಹರಾಜ್ ಮುಂಜೂರ್ ಮಾಡಲ್ಪಟ್ಟು ಸಂಗತಿ ಡೆಪ್ಯೂಟಿ ಅಮಲ್‌ದಾರ್ರಿಂದ ಜಡಸವಾಲ್‌ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತ್ತು 7 ದಿವಸಗಳೊಳಗಾಗಿ ಜಡಸವಾಲ್ ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಸೆಸ್ಸ್ ದೇಖೀಲ್ ಜಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

6. ಇಜಾರೇದಾರ್ರು ಹಿಡುವಳಿ ಜಮೀರ್ಗಳಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರ್ರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರ್ರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೆ ಆರಿಸಿಕೊಳ್ಳಕೂಡದು. ಅಥವಾ ಇಜಾರೆದಾರ್ರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರ್ರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆತಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಕಲ್ಲಿದ ಜಮೀರ್ಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರ್ರ ಅಭ್ಯಂತರವೇನೂ ಇರುವದಿಲ್ಲ. ಪರಂತು ಅಂಥಾ ಜಮೀರ್ಗಳಲ್ಲಿ ಸಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀರ್ಗಳನ್ನ ಇಜಾರೆದಾರ್ರು ಅಗಿಯಕೂಡದು. ಬಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಒಪ್ಪು ಮಣ ಕಲ್ಲುಗಳು, ಮತ್ತು ಅದು ರಫ್ತಾಗತಕ್ಕ ಸ್ಥಳ ಈ ಪಟ್ಟಿಗಳು ನಮೂದು ಕಂಡು ಸಬ್ ತಾಲ್ಲೂಕು ಡೆಪ್ಯೂಟಿ ಅಮಲ್‌ದಾರ್ರಿಂದ ಬಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನ ಇಜಾರೇದಾರ್ರು ಸಾಗಿಸಕೂಡದು.

ಎ. ಕೃಷ್ಣಸ್ವಾಮ್ಯಯ್ಯಂಗಾರ್ರು,
ಡೆಪ್ಯೂಟಿ ಕಮ್ಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.
ಇಸ್ತಿಹಾರ್ನಾಮೆ.

ತಾರೀಖು 5ನೇ ಜೂ೯ 1896ನೇ ಇಸವಿ.

ಇದರಿಂದ ಸಕಲ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಈ ಕೆಳಗೆ ನಮೂದಿಸುವ ಸಂದಲ್ ಕೋಠಿಗಳಿಗೆ ಅವುಗಳ ಬಾಜೂದಲ್ಲಿ ಕಾಣಿಸಿರುವ ತಾಲ್ಲೂಕಿನ ಹೋಬಳಿಗಳಿಂದ ಪಣ ಸಂದಲ್ ಮರಗಳು ಮತ್ತು ಹೊಂಭಿಸಿ ಎಂದು ಕರಿಯಲ್ಪಡುವ ಕ್ಷೀಣ ಹೊಂದುತ್ತಾ ಇರುವ ಬಲಿತ ಸಂದಲ್ ಮರಗಳು, ಮತ್ತು ನೆಲದಲ್ಲಿ ಬಿಟ್ಟು ಇರುವ ಬೇರುಗಳು, ಬೇರು ಸಹಿತ ಕೀಳಿಸಿ ಬೀಳಿಸಿ ಮರ ಕಾವುಗಾರಿಯಿಂದ 1896ನೇ ಇಸವಿ ಅಕ್ಟೋಬರು 31ನೇ ತಾರೀಖಿನೊಳಗೆ ಕೋಠಿಗೆ ರವಾನಿಸಿ ಕೊಡುವದಕ್ಕೆ ಕಂಟ್ರಾಕ್ಟು ದರಖಾಸ್ತುಗಳು ಅಂಗೀಕರಿಸಲ್ಪಡುತ್ತೆ.

ನಂಬರು.	ಕೋಠೀಹೆಸರು.	ಜಮಾಯಿಸುವ ಮೊತ್ತ.	ಹೋಬಳಿ ಹೆಸರು.	ತಾಲ್ಲೂಕು ಹೆಸರು.
1	ಶಿವಮೊಗ್ಗ	30 ಟ್ಕ.	ಆಗರದಹಳ್ಳಿ ತರಫ಼ಿ ಹೊಳಲೂರು	ಶಿವಮೊಗ್ಗ
		20 ,,	ಹೊಳೇಹೊನ್ನೂರು	ಡಿಟೋ
		25 ,,	ಚನ್ನಗಿರಿ	ಚನ್ನಗಿರಿ.
		25 ,,	ಭದ್ರಾವತಿ	ಡಿಟೋ
		25 ,,	ಅನಂತಪುರ	ಸಾಗರ
2	ಸಾಗರ	25 ,,	ಆರಗ	ತೀರ್ಥಹಳ್ಳಿ
3	ತೀರ್ಥಹಳ್ಳಿ	25 ,,	ಅಗ್ರಹಾರ	ಡಿಟೋ
		25 ,,	ಹುಮಚ	ನಗರ
		200		

2. ಎಲ್ಲಾ ಟೆಂಡರುಗಳ ಮೇಲೂ ಇಂಥಾ ಸಂದಲ್ ಕೋಠಿಗೆ ಪಣ ಮತ್ತು ಹೊಂಭೀ ಸಂದಲ್ ಜಮಾಯಿಸುವ ಬಗ್ಗೆ ಟೆಂಡರ್ ಎಂದು ಬರಿಯತಕ್ಕದ್ದು. ಮತ್ತು ಟೆಂಡರ್ ಸಂಗಡ ಕೋಠಿ ಒಂದಕ್ಕೆ 50 ರೂಪಾಯಿನಂತೆ ಕರ್ನೆಸೀ ನೋಟು ಮೂಲಕ ಕೇವಣಿ ಹಾಜರ್ಮಾಡತಕ್ಕದ್ದು. ಅಂಗೀಕರಿಸದೇ ಇದ್ದ ಟೆಂಡರಿನ ಸಂಗಡ ಮೊಬಲಗು ವಾಪಸು ಮಾಡಲ್ಪಡುವದು.

3. ಟೆಂಡರುಗಳು ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ಹೆಸರಿನಲ್ಲಿ ಬರಿಯತಕ್ಕದ್ದು. 1896ನೇ ಇಸವಿ ಜುಲೈ 15ನೇ ತಾರೀಖು ದಿವಿ 12 ಘಂಟೆವರಿಗೂ ಸದರೀ ಟೆಂಡರುಗಳು ಅಂಗೀಕರಿಸಲ್ಪಡುವವು.

4. ಪ್ರತಿಯೊಬ್ಬ ದರಖಾಸ್ತುದಾರನೂ ಈ ಕೆಳಗೆ ನಮೂದಿಸುವ ತಪಸೀಲಿನಂತೆ ವಣ ಮತ್ತು ಹೊಂಭಳೀ ಸಂದಲು ಮರಗಳ ಜಡ ಸಹಿತ ಕೀಳಿಸಿ ಬಿಡೇ ಮರ ಕಾಮಗಾರಿಯಿಂದ ಕೋಲಿಗೆಪ್ರತಿಯೊಂದು ಹೋಬಳಿ ಯಿಂದ ರವಾನಿಸುವದಕ್ಕೆ ಟ್ಯ ಬಂದಕ್ಕೆ ಆಫೈರ್ ದರ ನಮೂದಿಸತಕ್ಕದ್ದು.

(1). ಬಣಗಿರುವ ಸಂದಲ್ ಮರಗಳು ಮತ್ತು ನೆಲದಲ್ಲಿ ಬಿಟ್ಟ ಹಳೀ ಜಡಗಳು ಜಮಾವಣಿ ಬಗ್ಯೆ.

(2). ಕ್ಷೀಣ ಹೊಂದುತ್ತಾ ಇರುವ ಸುಮಾರು ಅರ್ಧಭಾಗದವರಿವಿಗೂ ವಣಗಿರುವ ಹೊಂಭಳೀ ಎಂದು ಕರಿಯಲ್ಪಡುವ ಬಲಿತಸಂದಲ್ ಮರಗಳೂ.

(5). ಕಂಟ್ರಾಕ್ಟುದಾರನು ಲೆಖ್ಕಕ್ಕೆ ತರಲ್ಪಟ್ಟ ತೇದಾದಿನ ವೇಲೆ ಆರವಾಶಿ ವಗೈರೆ ಭರ್ತಿಗಾಗಿ ಟ್ಯ ಬಂದಕ್ಕೆ ಎರಡು ಹಂಡ್ರಡ್‌ವೇಟು ಅಂದರೆ ಕೇಕಡಾ 10 ರಂತೆ ಹೆಚ್ಚು ತೂಕವನ್ನು ಕೊಡಲು ಬದ್ಧನಾಗಿರತಕ್ಕದ್ದು.

6. ಸಂದಲ್ ಮರಗಳ ಚನಾಯಿಸೋಣ, ಕೀಳುವಿಕೆ, ಬರಟು ಕೆತ್ತನೆ, ಮತ್ತು ಅದೇ ವಿಷಯಗಳಲ್ಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವರು ಮಾಡುವ ರೂಲ್ಸು ಮತ್ತು ಕಾನೂನುಗಳಿಗೆ ಕಂಟ್ರಾಕ್ಟುದಾರನು ಖಂಡಿತವಾಗಿ ಬದ್ಧನಾಗಿರ ತಕ್ಕದ್ದು.

7. ಬಂದು ಅಂಗುಲಕ್ಕಿಂತ ಜಾಸ್ತಿಯಾಗಿ ಜೇಗುವುಳ್ಳ ಶಿಪ್ಪೆ ತಲೆಗಳು ಜಂಗಲುಗಳಲ್ಲಿ ಬಿಡಕೂಡದು. ವರಟು ಕೆತ್ತನೆ ಮಾಡದೆ ಹಾಗೆಯೇ ಕೋಲಿಗೆ ರವಾನಿಸಬೇಕು. ಅಂಥಾ ತಲೆ ಕೊನೆಗಳಿಗೆ ರವಾನೆ ಛಾರ್ಜ್ ಮಾತ್ರ ಪಾವತಿ ಮಾಡ ಲ್ಪಡುತ್ತೆ. ಬುಕಣಿ ಮತ್ತು ಜೇಗು ಇರತಕ್ಕ ಜಕ್ಕೆ, ಮರಗಳ ಜೊತೆಯಲ್ಲಿಯೇ ಸಾಗಿಸಲ್ಪಡಬೇಕು.

8. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವರು ಪ್ರತಿ ಮಾಹೆಯಲ್ಲೂ ಎಷ್ಟು ಮೊತ್ತ ತಯಾರಿಯಿಂದ ಸಾಗಿಸಲ್ಪಡಬೇಕೆಂದು ವಿಧಾಯಕಮಾಡುತ್ತಾರೋ ಅಷ್ಟು ಮೊತ್ತವನ್ನು ಖಂಡಿತವಾಗಿ ಕೋಲಿಗಳಿಗೆ ತಯಾರಿಯಿಂದ ರವಾನಿಸಬೇಕು. ಇದಕ್ಕೆ ತಪ್ಪಿದಲ್ಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವರಿಂದ ಮೊಕರೂರ್ಮಾಡಲ್ಪಡುವ ಪೆನಾಲ್‌ಟಿಗೆ ಗುರಿಯಾಗತಕ್ಕದ್ದು.

9. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಟೆಂಡರ್ ಅಂಗೀಕರಿಸಿದ ವರ್ತಮಾನವನ್ನು ತಿಳಿದ ಬಂದು ವಾರದೊಳಗಾಗಿ ಕಂಟ್ರಾಕ್ಟು ಮುಚ್ಚಳಿಕೆಯನ್ನು ಬರದುಕೊಡಜ್ಞಕ್ಕಲ್ಲದೆ ತನ್ನ ಕಂಟ್ರಾಕ್ಟು ಸರಿಯಾಗಿ ಪೂರೈಸಿಕೊಡುವದಕ್ಕೆ ಖಾತ ರಿಗಾಗಿ ಪುನಹ 100 ಬಂದು ನೂರು ರೂಪಾಯಿ ಠೇವಣೀ ಇಡತಕ್ಕದ್ದು. ಕಂಟ್ರಾಕ್ಟಿನ ಷರತ್ತಿನಲ್ಲಿ ಯಾವದನ್ನಾ ದರೂ ತಪ್ಪಿದರೆ ಠೇವಣೀ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

10. ಕಮ್ಮಿ ದರದ ಟೆಂಡರ್ ಆಗಲಿ ಯಾ ಮತ್ಯಾವ ಟೆಂಡರೇ ಆಗಲಿ ತಿರಸ್ಕರಿಸುವದಕ್ಕೆ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವ ರು ಸ್ವತಂತ್ರರಾಗಿರುತ್ತಾರೆ. ಮತ್ತು ಅಂಥಾ ಅಂಗೀಕರಿಸಲ್ಪಡುವ ಟೆಂಡರುಗಳು ಡೆಪ್ಯೂಟಿ ಕಮ್ಮಿಷನರ ಸಾಹೇಬರವ ರ ಒಪ್ಪಿಗೆಯಿಂದ ಫಾರೆಸ್ಟು ಕನ್ಸರ್‌ವೇಟರ್ ಸಾಹೇಬರವರ ಮಂಜೂರಾತಿಗೆ ಬಳಪಟ್ಟಿರತಕ್ಕದ್ದು.

11. ಸಂದಲನ್ನು ಸಾಗಿಸುವದಕ್ಕೋಸ್ಕರ ಬೇಕಾಗುವ ಏರ್ಪಾಟುಗಳನ್ನು ಕಂಟ್ರಾಕ್ಟುದಾರನೇ ಮಾಡಿಕೊಳ್ಳತಕ್ಕದ್ದು. ಸರ್ಕಾರದವರು ರಸ್ತೆಯನ್ನಾಗಲಿ ಭಂಡೀದಾರಿಯನ್ನಾಗಲಿ ಮಾಡಿಸಿಕೊಡುವದಕ್ಕೆ ಬದ್ಧರಾಗಿರುವದಿಲ್ಲ. ಮತ್ತು ಈ ನೆಪದಿಂದ ಸಂದಲ್ ವಾಯಿದೆಯಲ್ಲಿ ತಾರದೆಯಿದ್ದರೆ, ಯಾವ ಕಾರಣವೂ ಅಂಗೀಕರಿಸಲ್ಪಡಲಾರದು.

12. ಇನ್ಯಾವ ಸಂಗತಿಗಳಾದರೂ ತಿಳಿದುಕೊಳ್ಳಬೇಕಾಗಿದ್ದಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ಕೇಳತಕ್ಕದ್ದು. ಮತ್ತು ಅಲ್ಲಿ ನೋಟಿಸ್ ಬೋರ್ಡಿನ ವೇಲೆ ಇಸ್ತಿಹಾರುನಾಮೆಯ ನಕಲು ಮತ್ತು ಕಂಟ್ರಾಕ್ಟು ಮುಚ್ಚಳಿಕೆ ನಕಲು ಸಹ ನೋಡಬಹುದು.

ಸಿ. ಅಪ್ಪಯ್ಯ,
ಫಾರ್ ಕನ್ಸರ್‌ವೇಟರ್ ಆಫ್ ಫಾರೆಸ್ಟ್ಸ್
ಮೈಸೂರ್.

ಸದರ್ನ್ ಮರಾಟಾ ರೆಯಿಲ್‌ವೆ.

(ಮೈಸೂರು ಸ್ಟೇಟ್ ರೆಯಿಲ್‌ವೆ)

ನೋಟಿಸ್.

ನಂಜನಗೂಡು, ಮೈಸೂರು ಮತ್ತು ಪಶ್ಚಿಮ ವಾಹಿನೀ ರೆಯಿಲ್‌ವೆ ಸ್ಟೇಷನ್‌ಗಳಲ್ಲಿ ರೆಯಿಲ್ವೆಗೆ ಸಾಮಾನ್‌ಗಳನ್ನು ಭರ್ತೀ ಮಾ ಡುವ ಸ್ಥಳದಲ್ಲಿ ಬಿದ್ದಿರುವಂಥ ನಾಟಾಗಳ ಮಾಲೀಕರಾದ ಯೆಲ್ಲರಿಗೂ ಈ ಮೂಲಕ ತಿಳಿಯಪಡಿಸುವದೇನಂದರೆ:—

ಸದರಿಯವರುಗಳು ತಾವೇ ಖುದ್ದಾಗಿಯಾಗಲಿ ಅಥವಾ ಮುಕ್ತಾರೀಲ್‌ಕರ ಮೂಲಕವಾಗಿ ಯಾಗಲಿ ಈ 96ನೇ ಇಸವಿ ಜೂನ್ 21ನೇ ತಾರೀಖಿನ ತತ್ಪೂರ್ವವಾಗಿ ಆಯಾಯ ಸ್ಟೇಷನ್‌ಬಳಿ ಹಾಜರಾಗಿ, ತಮ್ಮ ತಮ್ಮ ನಾಟಾಗಳನ್ನು ಗುರ್ತಿಸಿ, ರೆಯಿಲ್ವೇ ಮು ಖಾಂತ್ರ ಅವುಗಳನ್ನು ಸಾಗಿಸಲಿಕ್ಕೆ ಪ್ರತಿ ಬಂದು ಭರ್ತೀ ವಾಗಿನಿಗೂ ಬಂದೊಂದು ಪೌರ್ಡರ್‌ಗಿಂಗ್ ನೋಟಿನಂತೆ ಕೊಡಲೆ